ತ್ತದೆ ಮತ್ತು low level causeway ಕಟ್ಟಿದರೆ ೧೫ ಲಕ್ಷ ರೂಪಾಯಿಗಳಾಗುತ್ತದೆ, ಸಿರಕನಹಳ್ಳಿಯಲ್ಲಿ low level Causeway ಕಟ್ಟಿದರೆ ೩ ಲಕ್ಷ ರೂಪಾಯಿಗಳಾಗುತ ದೆ. ಬರಡೋಲ ಗ್ರಾಮದಲ್ಲಿ high level submersible causeway ಕಟ್ಟಿದರೆ ೧೦ ಲಕ್ಷ ರೂಪಾಯಿಗಳಾಗುತ ದೆ ಮತ್ತು low level Causeway ಕಟ್ಟಿದರೆ ೩ ಲಕ್ಷ ರೂಪಾಯಿಗಳಾಗುತ ದೆ.

ಶ್ರೀ ಎಸ್. ಎಸ್. ಅರಕೇರಿ.—ಬಹಳ ಪ್ರಾಮುಖ್ಯ ಪಡೆದಿರುವ ಹಲಸಂಗಿ ಮತ್ತು ಕಲ್ಲಹಳ್ಳಿ ಸಿರಕನಹಳ್ಳಿಗಳಲ್ಲಿ ಆದಷ್ಟು ಬೇಗ high level causeway ಕಟ್ಟಿದರೆ ನಾನು ಮಾನ್ಯ ಸಚಿವರಿಗೆ ತುಂಬಾ ಆಭಾರಿಯಾಗಿರುತ್ತೇನೆ. ಮತ್ತು ಹಲಸಂಗಿಯಲ್ಲಿ ಬ್ಯಾರೇಜ್ ಕಟ್ಟಿದರೆ ರೈತರಿಗೆ ಅನುಕೂಲವಾಗುತ್ತದೆಯೇ ಅಥವಾ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಯೇ ಎಂಬುದನ್ನು ತಾವು ವಿಚಾರ ಮಾಡಿ ನನ್ನ ಮತದಾರರ ಕ್ಷೇತ್ರಕ್ಕೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—High level causeway ಕಟ್ಟಿದರೆ ಶಾಶ್ವತವಾಗಿರುತ್ತದೆ ಆದರೆ ಹಣ ಸ್ವಲ್ಪ ದುಬಾರಿ ವೆಚ್ಚವಾಗುತ್ತದೆ. Low level causeway ಕಟ್ಟಿದರೆ ಹಣ ಸ್ವಲ್ಪ ಕಡಿಮೆಯಾಗುತ್ತದೆ, ಬೇಗ ಕೆಲಸ ಮಾಡಿಸಬಹುದು. ಆದರೆ, ಯಾವುದು ಅನುಕೂಲ ಮತ್ತು ಯಾವುದು ಅನಾನುಕೂಲವೆಂಬುದನ್ನು. ಇದರ ಮ್ಯಾಪ್ (ನಕ್ಷೆ) ಎಲ್ಲವನ್ನೂ ತರಿಸಿಕೊಂಡು, ಮಾನ್ಯ ಸದಸ್ಯರೊಡನೆ ಚರ್ಚೆ ಮಾಡಿ, ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದಾಗ್ಯೂ ಅಗತ್ಯವಿರುವ ಒಂದೆರಡು ಕಡೆಗಳಲ್ಲಿ low level causeway ಮಾಡಿದರೆ ಅನುಕೂಲವೆಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದ್ದರೆ ಆದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—೧೯೮೧-೮೨ನೇ ಸಾಲಿನ ಆಯವ್ಯಯ ಪತ್ರದಲ್ಲಿ ಈ ಕಾಮಗಾರಿಗಳನ್ನು ಸೇರಿಸಲಾಗಿದೆ ಎಂದು ಹೇಳಲಾಗಿದ್ದರೂ, ಆಚ್ಚಾಗಿರುವ ಪ್ರಶ್ನೋತ್ತರ ಪತ್ರದಲ್ಲಿ ''ಸೇರಿಸಿಲ್ಲ'' ಎಂದು ಮಾನ್ಯ ಸಚಿವರು ಹೇಳಿದ್ದಾರೆ. ೧೯೮೧-೮೨ನೇ ಸಾಲಿನ ಆಯವ್ಯಯದಲ್ಲಿ ಯಾವ ಯಾವ ಕಾಮಗಾರಿಗಳನ್ನು ಸೇರಿಸಬೇಕೆಂದು ನಮ್ಮ ಅಭಿಪ್ರಾಯ ಕೇಳಿ ಕಳುಹಿಸಿದ ಸುತ್ತೋಲೆ ಪ್ರಕಾರ ನಾನು ಕಲ್ಲಹಳ್ಳಿ, ಹಲಸಂಗಿ ಮತ್ತು ಸಿರಕನಹಳ್ಳಿ ಸೇತುವೆಗಳನ್ನು ಆದ್ಯತೆ ಮೇರೆಗೆ ನಿರ್ಮಿಸಬೇಕೆಂದು ಮಾನ್ಯ ಸಚಿವರಿಗೆ ಹೇಳಿದ್ದೇನೆ. ಆದಂದರಿಂದ, ೧೯೮೧-೮೨ರ ಸಪ್ಲಿಮೆಂಟರಿ ಆಯವ್ಯಯದಲ್ಲಾದರೂ ಇದನ್ನು ಸೇರಿಸುವಿರಾ?

ಶ್ರೀ ಕಾಗೋಡು ತಿಮ್ಮಪ್ಪ.—೧೯೮೧-೮೨ರಲ್ಲಿ ಹೊಸ ಕಾರ್ಯಕ್ರಮ ಮಾಡಿದ್ದೇವೆ, ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಪಡೆದಿದ್ದೇವೆ. ತಮ್ಮ ಕ್ಷೇತ್ರದಲ್ಲಿ ಆಗಬೇಕಾಗಿರುವ ಕಾಮಗಾರಿಗಳ ಬಗೆ ಮಾನ್ಯ ಸದಸ್ಯರು ಯಾವು ಯಾವುದನ್ನು ಕೊಟ್ಟಿದಾದ್ದಾರೆಂಬುದನ್ನು ತೆಗೆದು ನೋಡುತ್ತೇನೆ. ಮತ್ತು ಮಾನ್ಯ ಸದಸ್ಯರ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಅದನ್ನು ಕಾರ್ಯಗತ ಮಾಡುವುದಕ್ಕೆ ಖಂಡಿತ ಪ್ರಯತ್ನ ಮಾಡುತ್ತೇನೆ.

Interland Water Transport in D.K. District

(270) SRI A. G. KODGI (Baindur).—Will the Minister of State for Fisheries and Ports be pleased to state.—

(a) whether there is any proposal to develop interland water transport system in Dakshina Kannada District.

(b) if so, the progress achieved so far in this regard?

SRI D. B. Pawar (Minister of State for Fisheries and Ports).—

(a) Yes).

(b) 1. Departmental operation has been introduced at two ferries with mechanised boats.

2. Four schemes have already been sanctioned and are awaiting implementation.

3. Proposal for providing mechanised boat at one ferry is under consideration.

4. Proposal for construction of an IWT Canal between Mangalore and Coondapur is under investigation.

ಶ್ರೀ ಎ. ಜಿ. ಕೊಡಗಿ.—ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ, ಎರಡು ದೋಣಿ ನಡೆಸಂವ ಸ್ಥಳಗಳಲ್ಲಿ ಇಲಾಖೆಯವರಿಂದ ಯಾಂತ್ರಿಕೃತ ದೋಣಿಗಳ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದ್ದಾರೆ. ಅವು ಯಾವುವು? ಮತ್ತು ನಾಲ್ಕು ಯೋಜನೆಗಳು ಮಂಜೂರು ಆಗಿವೆ ಎಂದು ಹೇಳಿದರು. ಅವು ಯಾವುವು ಎಂಬುದನ್ನು ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

SRI D. B. PAWAR.—Sir, two ferry boats have been introduced in Dakshina Karnada. One is Hangerkatta Bengere across Sitandi river. Second one is Pavoor–Adyar across Netravati river. Secondly, four schemes are sanctioned for Dakshina Kannada. They are,

i) Maroor–Mandekol across Payaswini river,
ii) Kantamangal–Ajjawar across Payaswini river,
iii) Maraswamy–Padukine across Kollur river, and
iv) Authrebail–Kenju across Gurupur river.

ಶ್ರೀ ಎ. ಜಿ. ಕೊಡಗಿ.—ನಾಲ್ಕು ಯೋಜನೆಗಳಲ್ಲೊಂದಾದ ಕೊಲ್ಲೂರು ಹೊಳೆ ಮರಿಸ್ವಾಮಿ–ಪಡುಕೋಣೆ ನಾಡ ಯಾವ ಪಂತದಲ್ಲಿದೆ ಮತ್ತು ಅದನ್ನು ಯಾವಾಗ ಕಾರ್ಯಾಚರಣೆಗೆ ತರುವಿರೆಂದು ತಿಳಿಸುವಿರಾ?

SRI D. B. PAWAR.—The point is, boats are getting ready. As soon as we get delivery of these boats they will be introduced.

ಶ್ರೀ ಎ. ಜಿ. ಕೊಡಗಿ.—ಮಂಗಳೂರು ಹಾಗೂ ಕುಂದಾಪುರ ನಡುವೆ ಕಾಲುವೆ ನಿರ್ಮಾಣದ ಸಲಹೆ ಇದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಹಾಗಾದರೆ ಅದರ ಒಟ್ಟು ಅಂದಾಜು ಎಷ್ಟು? ಮತ್ತು ಅದನ್ನು ಶೀಘ್ರವಾಗಿ ಕಾರ್ಯಾಚರಣೆಗೆ ತರುವ ಯೋಚನೆ ಸರ್ಕಾರಕ್ಕಿದೆಯೆ?

SRI D. B. PAWAR.—The estimated cost of the Canal is said to be heavy *i.e.* nearly Rs. 5.37 crores. Government is seized of the matter and trying to investigate into the matter. The construction of canal work will be taken up if it is found feasible.

ಶ್ರೀ ಡಿ. ವಿ. ವೈಗಾಂವಕರ್.—ನಾಲ್ಕು ಯಾಂತ್ರಿಕೃತ ದೋಣಿ ಯೋಜನೆಗಳು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಮಂಜೂರಾಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಅದೇ ರೀತಿ ರಾಜ್ಯದ ಇತರೇ ಜಿಲ್ಲೆಗಳಿಗೂ ಆನ್ವಯಿಸುವಂತೆ ಒಂದು ಸಮಗ್ರ ಯೋಜನೆ ಏನಾದರೂ ತಯಾರಾಗಿದೆಯೆ?

ಅಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಿದ್ದು ಅದಕ್ಕೆ ಉತ್ತರ ಆಯ್ತಲ್ಲ.